ಬಗ್ಗೆ ನಾನು ಅವರನ್ನು ಕರೆದು ಕೂಲಂಕಷವಾಗಿ ಚರ್ಚೆ ಮಾಡುತ್ತೇನೆ. ನಾನು ಕೂಡ 6 ತಿಂಗಳ ಹಿಂದೆ ಹೋಗಿ ನೋಡಿದ್ದೇವೆ. ಸರ್ಕಾರ ಇದರ ಬಗ್ಗೆ ಗಮನ ಹರಿಸಿ ಕೆ.ಆರ್.ಎಸ್ ನಿಂದ ನೀರು ಬಿಡುವಂತಹ ಸಂದರ್ಭದಲ್ಲಿ ಮೂರು ದಿವಸಗಳ ಮುಂಚೆ ಎಚ್ಚರಿಕೆಯನ್ನು ಕೊಡುವಂತಯಹ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳುವಲ್ಲಿ ನಾವು ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ರಂಗನತಿಟ್ಟು ಪ್ರಪಂಚದಲ್ಲಿಯೇ ಒಂದು ಉತ್ತಮವಾಗಿರತಕ್ಕಂಥ ಒಂದು ಪ್ರವಾಸಿಗರ ತಾಣ. ನಾವು ಇದಕ್ಕೆ 20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇನ್ನೂ ಒಂದು 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವಲ್ಲಿ ಸರ್ಕಾರ ಕ್ರಮವನ್ನು ಕೈಗೊಳ್ಳುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ರಂಗನತಿಟ್ಟು ಪ್ರವಾಸಿ ತಾಣ ಬಹಳ ಪ್ರಸಿದ್ಧಿಯಾಗಿರತಕ್ಕಂಥಾದ್ದು. ಆದರೆ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದರ ಸುತ್ತ ಮುತ್ತಲೂ ಇರತಕ್ಕಂಥ ಕಾರ್ಖಾನೆಗಳಲ್ಲಿ ತೊಳೆದಂತಹ ಕೆಟ್ಟ ನೀರನ್ನು ಆ ನದಿಗೆ ಬಿಡುವುದರಿಂದ ಆ ಪಕ್ಷಿಗಳಿಗೆ ಅಪಾಯ ಒದಗಿದೆ. ಸರ್ಕಾರ ಇದರ ಬಗ್ಗೆ ತೀವ್ರವಾದ ಗಮನಹರಿಸಿ ಸರ್ಕಾರ ಇದರ ಬಗ್ಗೆ ಸಂಪೂರ್ಣವಾದ ತನಿಖೆ ಮಾಡಿಸಿ ಎನು ಆಗಬೇಕೋ ಅದನ್ನು ಮಾಡುತ್ತದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಗಮನಹರಿಸುವುದು ಅಲ್ಲ ಕೂಡಲೇ ಅದನ್ನು ನಿಲ್ಲಿಸುವಂತಹ ಕ್ರಮ ಕೈಗೊಳ್ಳುತ್ತೇವೆ. ಸಂದರ್ಭ ಬಂದಾಗ ನಾನು ನೀವು ಮತ್ತು ಪುಟ್ಟಣ್ಣಯ್ಯನವರು ಒಟ್ಟಿಗೆ ಹೋಗಿ ನೋಡುವಂತಹ ಕಾರ್ಯಕ್ರಮ ಮಾಡೋಣ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಮಾನ್ಯ ಅಧ್ಯಕ್ಷರೇ, ಒಂದು ಕಾನೂನು ಮಾಡಬೇಕು. ಆದೇನೆಂದರೆ ಪಕ್ಷಿಗಳನ್ನು ರಾಜ್ಯಾದ್ಯಂತ ಯಾರೂ ಯಾವ ಕಾರಣಕ್ಕೂ ಹೊಡೆಯಬಾರದು.

ಅಧ್ಯಕ್ಷರು : ಅದು ಈಗಾಗಲೇ ಇದೆ.

ಶ್ರೀ ಎಂ. ಸಿ. ನಾಣಯ್ಯ :- ಕಾನೂನು ಇದೆ. ಪಕ್ಷಿಗಳ ಮೇಲೆ ಗುಂಡು ಹೊಡೆಯುವಂತಾದ್ದನ್ನು ಸಂಪೂರ್ಣವಾಗಿ ನಿಷೇಧ ಮಾಡಲಾಗಿದೆ. ಆ ತರಹ ಎಲ್ಲಿಯಾದರೂ ಇದ್ದರೆ ತಿಳಿಸಿ, ನಾವು ನಿಲ್ಲಿಸುತ್ತೇವೆ.

ಶ್ರೀಮತಿ ಬಿ. ಟಿ. ಲಲಿತಾನಾಯಕ್ :- ಮಾನ್ಯ ಅಧ್ಯಕ್ಷರೇ, ಕೆಲವರು ತಮ್ಮ ಶೋಕಿಗಾಗಿ ಪಕ್ಷಿಗಳನ್ನು ಬಂದಿಸಿ ಬಹಳ ಹಿಂಸೆ ಮಾಡುತ್ತಾರೆ. ಅದನ್ನು ಸಹ ತಪ್ಪಿಸಬೇಕು.

ಅಧ್ಯಕ್ಷರು :- ಹೊನ್ನಾವರ ರಸ್ತೆ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಪ್ರಶ್ನೆಗಳು ಇಲ್ಲಿರುವುದರಿಂದ ಮಾನ್ಯ ಮಾಧುಸ್ವಾಮಿಯವರೂ ಸಹ ಈಗಲೇ ಉಪ ಪ್ರಶ್ನೆಗಳನ್ನು ಕೇಳಬಹುದು.

ಬೆಂಗಳೂರು ಹೊನ್ನಾವರ ಹೆದ್ದಾರಿ ಅಭಿವೃದ್ಧಿ

71(470) ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ಬೆಂಗಳೂರು - ಹೊನ್ನಾವರ ರಾಜ್ಯ ಹೆದ್ದಾರಿ ರಸ್ತೆ ತೀವ್ರ ಹಾಳಾಗಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಸರ್ಕಾರವು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದೇ;

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಆ) ವಾಹನ ಸಂಚಾರಕ್ಕೆ ತೊಂದರೆಯಾಗಿರುವುದಿಲ್ಲ.

ಆ) ವಾರ್ಷಿಕ ದುರಸ್ತಿ, ವಿಶೇಷ ದುರಸ್ತಿ ಹಾಗೂ ಮಳೆ ಹಾನಿ ದುರಸ್ತಿಯಡಿಯಲ್ಲಿ ಶಿವಮೊಗ್ಗ, ಹಾಸನ, ಬೆಂಗಳೂರು, ತುಮಕೂರು ಚಿಕ್ಕಮಂಗಳೂರು ವಿಭಾಗದಲ್ಲಿ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಆಧ್ಯತೆ ಪಡಿಸಿದ ರಾಜ್ಯ ಹೆದ್ದಾರಿ ಅಡಿ 200 ಲಕ್ಷ ರೂ. ಗಳ ಅಂದಾಜಿನಡಿ, ರಸ್ತೆಯ ಆಯ್ದ ಭಾಗಗಳ ಅಭಿವೃದ್ಧಿ ಮಾಡಲಾಗುತ್ತಿದೆ.

ಇ) ರಾಜ್ಯ ಹೆದ್ದಾರಿಗಳನ್ನು ವಿಶ್ವ ಬ್ಯಾಂಕಿನ ನೆರವಿನಡಿಯಲ್ಲಿ 900.00 ಕೋಟಿ ರೂ. ಗಳ ಅಂದಾಜಿನಲ್ಲಿ ಸುಮಾರು 3000 ಕಿಮೀ. ರಸ್ತೆಯನ್ನು ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ. ಅದರಲ್ಲಿ ಈ ರಾಜ್ಯ ಹೆದ್ದಾರಿಯೂ ಸಹ ಸೇರಿರುತ್ತದೆ.

TUMKUR - TIPTUR ROAD

74 (413) Sri. J.C. Madhuswamy (Chikkanyakanahally) : Will the Hon'ble Minister for Public Works be pleased to State

1. Is it a fact that Tumkur Honnavar road carry heavy traffic? Is this requested for conversion as National Highway.

2. If so, what is the stage and has it come to the notice of the Government that road between, Tumkur - Tiptur is in bad condition? What is the action taken by the Government to repair this road?

Sri C.M. UDASI (Minister for Public Works) :

1. Yes, Proposal has been submitted to the Ministry of Surface Transport to declare this road as National Highway.

2. The proposal has been submitted to the Ministry of Surface Transport. The Ministry of Surface Transport has to taken decision Maintenance work of Tumkur - Tiptur road is being done under the M & R grants and is kept in Traffic worthy condition. This work is also included as one if the roads for improvements under world bank loan assistance programme of Rs. 900 crores.